# ಅಧ್ಯಾಯ–I

## *ಪೀಠಿಕೆ*

**1.1.** ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಈ ವರದಿಯು ಸರ್ಕಾರಿ ಇಲಾಖೆಗಳು ಮತ್ತು ಸ್ವಾಯತ್ತ ಸಂಸ್ಥೆಗಳ ಅನುಸರಣಾ ಲೆಕ್ಕಪರಿಶೋಧನೆಯಿಂದ ತಿಳಿದುಬರುವ ವಿಷಯಗಳಿಗೆ ಸಂಬಂಧಿಸಿದೆ. ಅನುಸರಣಾ ಲೆಕ್ಕಪರಿಶೋಧನೆಯು ಭಾರತದ ಸಂವಿಧಾನದ ನಿಬಂಧನೆಗಳು, ಅನ್ವಯವಾಗುವ ಕಾನೂನುಗಳು, ನಿಯಮಗಳು, ನಿಬಂಧನೆಗಳು ಮತ್ತು ಸಕ್ಷಮ ಪ್ರಾಧಿಕಾರಗಳು ಜಾರಿ ಮಾಡಿದ ವಿವಿಧ ಆದೇಶಗಳು ಮತ್ತು ಸೂಚನೆಗಳನ್ನು ಅನುಸರಿಸಲಾಗುತ್ತಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಲು ಲೆಕ್ಕಪರಿಶೋಧಕ ಘಟಕಗಳ ವಹಿವಾಟುಗಳ ಪರಿಶೀಲನೆಯನ್ನು ಉಲ್ಲೇಖಿಸುತ್ತದೆ.

ಲೆಕ್ಕಪರಿಶೋಧನೆಯ ಪ್ರಮುಖ ಫಲಿತಾಂಶಗಳನ್ನು ರಾಜ್ಯ ಶಾಸಕಾಂಗದ ಗಮನಕ್ಕೆ ತರುವುದು ವರದಿಯ ಪ್ರಮುಖ ಉದ್ದೇಶವಾಗಿದೆ. ಲೆಕ್ಕಪರಿಶೋಧನಾ ಆವಿಷ್ಕಾರಗಳು ಕಾರ್ಯಾಂಗವು ಸರಿಪಡಿಸುವ ಕ್ರಮಗಳನ್ನು ತೆಗೆದುಕೊಳ್ಳಲು ಮತ್ತು ನೀತಿಗಳನ್ನು ರೂಪಿಸಲು ಹಾಗೂ ಸುಧಾರಿತ ನಿರ್ವಹಣೆಗೆ ಕಾರಣವಾಗುವ ನಿರ್ದೇಶನಗಳನ್ನು ನೀಡಲು ಅನುವು ಮಾಡಿಕೊಡುತ್ತದೆ ಎಂದು ನಿರೀಕ್ಷಿಸಲಾಗಿದೆ. ಹೀಗೆ, ಅದು ಉತ್ತಮ ಆಡಳಿತಕ್ಕೆ ಕೊಡುಗೆಯನ್ನೂ ನೀಡುತ್ತದೆ.

ಈ ಅಧ್ಯಾಯವು, ಲೆಕ್ಕಪರಿಶೋಧನೆಯ ಯೋಜನೆ ಮತ್ತು ವ್ಯಾಪ್ತಿಯನ್ನು ವಿವರಿಸುವುದರ ಜೊತೆಗೆ ಹಿಂದಿನ ಲೆಕ್ಕಪರಿಶೋಧನಾ ವರದಿಗಳ ಮೇಲಿನ ಅನುಪಾಲನೆಯ ಸಾರಾಂಶವನ್ನೂ ನೀಡುತ್ತದೆ. ಈ ವರದಿಯ ಅಧ್ಯಾಯ–II ಸರ್ಕಾರಿ ಇಲಾಖೆಗಳು ಮತ್ತು ಸ್ವಾಯತ್ತ ಸಂಸ್ಥೆಗಳಲ್ಲಿನ ಅನುಸರಣಾ ಲೆಕ್ಕಪರಿಶೋಧನೆಯ ಅವಲೋಕನಗಳಿಂದ ಕಂಡುಬಂದ ಫಲಿತಾಂಶಗಳನ್ನು ಒಳಗೊಂಡಿದೆ.

## ಆಯವ್ಯಯ ಚಿತ್ರಣ

**1.2.** 2015–16ರಿಂದ 2019–20ರ ಅವಧಿಯಲ್ಲಿ ಆಯವ್ಯಯ ಅಂದಾಜುಗಳು ಮತ್ತು ಅದಕ್ಕೆ ಪ್ರತಿಯಾಗಿ ರಾಜ್ಯ ಸರ್ಕಾರವು ಮಾಡಿದ ವಾಸ್ತವಿಕ ವೆಚ್ಚಗಳು ಕೆಳಗಿನ ಕೋಷ್ಟಕದಲ್ಲಿ ತೋರಿಸಿದಂತಿದ್ದವು:

**ಕೋಷ್ಟಕ ಸಂಖ್ಯೆ 1.1: 2015–16ರಿಂದ 2019–20ರ ಅವಧಿಯಲ್ಲಿ ಆಯವ್ಯಯ ಅಂದಾಜು ಮತ್ತು ರಾಜ್ಯ ಸರ್ಕಾರದಿಂದ ವಾಸ್ತವಿಕ ವೆಚ್ಚ**

(₹ ಕೋಟಿಗಳಲ್ಲಿ)

| ವೆಚ್ಚ | 2015–16 | | 2016–17 | | 2017–18 | | 2018–19 | | 2019–20 | |
|---|---|---|---|---|---|---|---|---|---|---|
| | ಆಯವ್ಯಯ ಅಂದಾಜು | ವಾಸ್ತವಿಕ | ಆಯವ್ಯಯ ಅಂದಾಜು | ವಾಸ್ತವಿಕ | ಆಯವ್ಯಯ ಅಂದಾಜು | ವಾಸ್ತವಿಕ | ಆಯವ್ಯಯ ಅಂದಾಜು | ವಾಸ್ತವಿಕ | ಆಯವ್ಯಯ ಅಂದಾಜು | ವಾಸ್ತವಿಕ |
| ಸಾಮಾನ್ಯ ಸೇವೆಗಳು | 30,997 | 30,799 | 35,018 | 31,265 | 38,009 | 34,484 | 45,744 | 42,655 | 50,492 | 48,824 |
| ಸಾಮಾಜಿಕ ಸೇವೆಗಳು | 45,728 | 46,307 | 50,960 | 54,549 | 55,887 | 58,652 | 70,226 | 67,935 | 71,350 | 66,373 |
| ಆರ್ಥಿಕ ಸೇವೆಗಳು | 32,175 | 33,846 | 38,277 | 40,421 | 43,671 | 42,856 | 44,152 | 48,285 | 52,907 | 52,636 |
| ಸಹಾಯಾನುದಾನಗಳು ಮತ್ತು ವಂತಿಗೆಗಳು | 6,549 | 6,076 | 5,980 | 5,686 | 7,187 | 6,490 | 6,167 | 5,425 | 6,856 | 6,425 |
| **ಒಟ್ಟು (1)** | **1,15,449** | **1,17,028** | **1,30,235** | **1,31,921** | **1,44,754** | **1,42,482** | **1,66,289** | **1,64,300** | **1,81,605** | **1,74,258** |
| ಬಂಡವಾಳ ವೆಚ್ಚ | 20,564 | 20,713 | 25,716 | 28,150 | 32,033 | 30,667 | 35,246 | 34,659 | 40,080 | 35,530 |
| ವಿತರಿಸಿದ ಸಾಲಗಳು ಮತ್ತು ಮುಂಗಡಗಳು | 733 | 657 | 625 | 1,934 | 1,597 | 5,093 | 5,817 | 4,487 | 2,503 | 4,069 |
| ಸಾರ್ವಜನಿಕ ಋಣದ ಮರುಪಾವತಿ | 5,788 | 4,110 | 6,841 | 7,420 | 8,176 | 8,269 | 11,136 | 11,083 | 9,964 | 10,180 |
| ಸಾಧಿಲ್ವಾರು ನಿಧಿ | 5 | 0 | 5 | 0 | 5 | 0 | 5 | 0 | 5 | 0 |
| ಸಾರ್ವಜನಿಕ ಲೆಕ್ಕ ವಿತರಣೆಗಳು | 2,83,523 | 1,55,095* | 3,42,036 | 1,67,154* | 5,09,624 | 1,94,537* | 5,10,667 | 2,34,330* | 5,19,964 | 2,45,292* |
| ಮುಕ್ತಾಯ ಶಿಲ್ಕು | – | 27,118 | – | 34,354 | – | 26,184 | – | 22,004 | – | 34,463 |
| **ಒಟ್ಟು (2)** | **3,10,613** | **2,07,693** | **3,75,223** | **2,39,012** | **5,51,435** | **2,64,750** | **5,62,871** | **3,06,563** | **5,72,516** | **3,29,534** |
| **ಒಟ್ಟು ಮೊತ್ತ (1 + 2)** | **4,26,062** | **3,24,721** | **5,05,458** | **3,70,933** | **6,96,189** | **4,07,232** | **7,29,160** | **4,70,863** | **7,54,121** | **5,03,792** |

* ಹೂಡಿಕೆಗಳನ್ನು ಒಳಗೊಂಡಿಲ್ಲ

**ಮೂಲ:** ವಾರ್ಷಿಕ ಹಣಕಾಸು ತ:ಖ್ತೆ ಮತ್ತು ಸಂಬಂಧಿತ ವರ್ಷಗಳ ರಾಜ್ಯ ಹಣಕಾಸು ಲೆಕ್ಕಪರಿಶೋಧನಾ ವರದಿಗಳು

### ರಾಜ್ಯ ಸರ್ಕಾರದ ಸಂಪನ್ಮೂಲಗಳ ಅನ್ವಯ

**1.3** ₹ 7,54,121 ಕೋಟಿಗಳ ಒಟ್ಟು ಆಯವ್ಯಯಕ್ಕೆ ಪ್ರತಿಯಾಗಿ 2019–20ರ ಅವಧಿಯಲ್ಲಿ ಸಂಪನ್ಮೂಲಗಳ ಅನ್ವಯವು ₹ 5,03,792 ಕೋಟಿ ಆಗಿತ್ತು. 2015–16ರಿಂದ 2019–20ರ ಅವಧಿಯಲ್ಲಿ ರಾಜ್ಯದ ಒಟ್ಟು ವೆಚ್ಚವು (ರಾಜಸ್ವ ವೆಚ್ಚ, ಬಂಡವಾಳ ವೆಚ್ಚ ಹಾಗೂ ಸಾಲಗಳು ಮತ್ತು ಮುಂಗಡಗಳು) ₹ 1,38,398 ಕೋಟಿಗಳಿಂದ ₹ 2,13,857 ಕೋಟಿಗೆ ವೃದ್ಧಿಯಾಗಿ ಶೇಕಡಾ 55ರಷ್ಟು ಏರಿಕೆಯಾಗಿದ್ದರೆ ಇದೇ ಅವಧಿಯಲ್ಲಿ ರಾಜಸ್ವ ವೆಚ್ಚವು ₹ 1,17,028 ಕೋಟಿಯಿಂದ ₹ 1,74,258 ಕೋಟಿಗೆ ವೃದ್ಧಿಯಾಗಿ ಶೇಕಡಾ 49ರಷ್ಟು ಏರಿಕೆಯಾಗಿತ್ತು. 2015–16ರಿಂದ 2019–20ರ ಅವಧಿಯಲ್ಲಿ ರಾಜಸ್ವ ವೆಚ್ಚವು ಒಟ್ಟು ವೆಚ್ಚದ ಶೇಕಡಾ 80ರಿಂದ 85ರಷ್ಟಿದ್ದರೆ ಬಂಡವಾಳ ವೆಚ್ಚವು ಶೇಕಡಾ 15ರಿಂದ 17ರಷ್ಟಿತ್ತು.

2015–16ರಿಂದ 2019–20ರ ಅವಧಿಯಲ್ಲಿ, ಒಟ್ಟು ವೆಚ್ಚವು ವಾರ್ಷಿಕ ಸರಾಸರಿ ಶೇಕಡಾ 12ರ ದರದಲ್ಲಿ ಏರಿದರೆ ರಾಜಸ್ವ ಸ್ವೀಕೃತಿಗಳು ವಾರ್ಷಿಕ ಸರಾಸರಿ ಶೇಕಡಾ 11ರ ದರದಲ್ಲಿ ಪ್ರತಿಶತದಲ್ಲಿ ಏರಿತು.

### ನಿರಂತರ ಉಳಿತಾಯಗಳು

**1.4.** ಕಳೆದ ಐದು ವರ್ಷಗಳಲ್ಲಿ ನಿರಂತರ ಉಳಿತಾಯಗಳ ಅನುದಾನವಾರು ವಿವರಗಳನ್ನು ***ಅನುಬಂಧ–1*** ರಲ್ಲಿ ನೀಡಲಾಗಿದೆ.

### ಭಾರತ ಸರ್ಕಾರದಿಂದ ಸಹಾಯಾನುದಾನಗಳು

**1.5.** ಹಿಂದಿನ ವರ್ಷಗಳಿಗೆ ಹೋಲಿಸಿದರೆ 2016–17ರಿಂದ 2019–20ರ ಅವಧಿಯಲ್ಲಿ ಭಾರತ ಸರ್ಕಾರದಿಂದ ಸಹಾಯಾನುದಾನಗಳು, ಕೆಳಗಿನ ಕೋಷ್ಟಕದಲ್ಲಿ ತೋರಿಸಿದಂತೆ, ಏರಿಕೆ ಪ್ರವೃತ್ತಿಯಲ್ಲಿದ್ದವು

**ಕೋಷ್ಟಕ ಸಂಖ್ಯೆ 1.2: ಭಾರತ ಸರ್ಕಾರದಿಂದ ಸ್ವೀಕರಿಸಿದ ಸಹಾಯಾನುದಾನಗಳು[1]**

(₹ ಕೋಟಿಗಳಲ್ಲಿ)

| ವಿವರಗಳು | 2015–16 | 2016–17 | 2017–18 | 2018–19 | 2019–20 |
|---|---|---|---|---|---|
| ಯೋಜನೇತರ ಅನುದಾನಗಳು* | 5,548 | 7,045 | – | – | – |
| ರಾಜ್ಯ ಯೋಜನೆಗಳಿಗೆ ಅನುದಾನಗಳು* | 8,105 | 8,102 | – | – | – |
| ಕೇಂದ್ರ ಯೋಜನೆಗಳಿಗೆ ಅನುದಾನಗಳು* | 139 | 116 | – | – | – |
| ಕೇಂದ್ರ ಪುರಸ್ಕೃತ ಯೋಜನೆಗಳಿಗೆ ಅನುದಾನಗಳು | 137 | 440 | 11,617 | 10,393 | 12,214 |
| ರಾಜ್ಯಗಳಿಗೆ ಇತರೆ ವರ್ಗಾವಣೆಗಳು/ ಅನುದಾನಗಳು | – | – | 7,316 | 11,714 | 17,593 |
| ಹಣಕಾಸು ಆಯೋಗದ ಅನುದಾನಗಳು | – | – | 2,708 | 3,374 | 4,673 |
| **ಒಟ್ಟು** | **13,929** | **15,703** | **21,641** | **25,481** | **34,480** |

* **2017–18ರಿಂದ ಜಾರಿಗೆ ಬರುವಂತೆ ಯೋಜನೆ ಮತ್ತು ಯೋಜನೇತರ ಅನುದಾನಗಳ ನಾಮಾವಳಿಯನ್ನು ತೆಗೆದುಹಾಕಲಾಗಿದೆ ಮತ್ತು ರಾಜ್ಯಗಳಿಗೆ ಅನುದಾನ/ಕೇಂದ್ರ ಪುರಸ್ಕೃತ ಯೋಜನೆ, ಹಣಕಾಸು ಆಯೋಗದ ಅನುದಾನ ಮತ್ತು ಇತರ ಅನುದಾನಗಳು ಎಂದು ಬದಲಿಸಿರುವುದರಿಂದ ಯಾವುದೇ ಅಂಕಿ ಅಂಶಗಳಿಲ್ಲ.**

**ಮೂಲ: ಹಣಕಾಸು ಲೆಕ್ಕಗಳು.**

### ಲೆಕ್ಕಪರಿಶೋಧನೆ ನಡೆಸಲು ಅಧಿಕಾರ

**1.6.** ಭಾರತ ಸಂವಿಧಾನದ 149 ಮತ್ತು 151ನೇ ವಿಧಿಗಳು ಮತ್ತು ಲೆಕ್ಕನಿಯಂತ್ರಕರು ಮತ್ತು

[1] ಇದು ಹಂಚಿಕೆಯನ್ನು ಒಳಗೊಂಡಿಲ್ಲ.

ಮಹಾಲೆಕ್ಕಪರಿಶೋಧಕರ (ಕರ್ತವ್ಯಗಳು, ಅಧಿಕಾರಗಳು ಮತ್ತು ಸೇವಾ ಷರತ್ತುಗಳು) (ಡಿಪಿಸಿ) ಕಾಯಿದೆ, 1971, ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರಿಗೆ (ಸಿಎಜಿ) ಲೆಕ್ಕಪರಿಶೋಧನೆ ನಡೆಸುವ ಅಧಿಕಾರವನ್ನು ನೀಡುತ್ತದೆ. ಸಿಎಜಿರವರ ಡಿಪಿಸಿ ಕಾಯಿದೆಯ ಸೆಕ್ಷನ್ 13[2]ರ ಅಡಿಯಲ್ಲಿ ಸಿಎಜಿರವರು ಕರ್ನಾಟಕ ಸರ್ಕಾರದ ಇಲಾಖೆಗಳ ವೆಚ್ಚದ ಲೆಕ್ಕಪರಿಶೋಧನೆಯನ್ನು ನಡೆಸುತ್ತಾರೆ. ಸಿಎಜಿರವರು 11 ಸ್ವಾಯತ್ತ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಏಕೈಕ ಲೆಕ್ಕಪರಿಶೋಧಕರಾಗಿದ್ದು, ಅವುಗಳನ್ನು ಸಿಎಜಿ (ಡಿಪಿಸಿ) ಕಾಯಿದೆಯ ಸೆಕ್ಷನ್ 19(2)[3] ಮತ್ತು 19(3)[4] ಅಡಿಯಲ್ಲಿ ಲೆಕ್ಕಪರಿಶೋಧನೆ ಮಾಡಲಾಗುತ್ತದೆ. ವಿವಿಧ ಲೆಕ್ಕಪರಿಶೋಧನೆಗಳಿಗೆ ಮಾನದಂಡಗಳು ಮತ್ತು ವಿಧಾನಗಳನ್ನು ಸಿಎಜಿರವರು ಜಾರಿ ಮಾಡಿರುವ ಲೆಕ್ಕಪರಿಶೋಧನಾ ಮಾನದಂಡಗಳು ಹಾಗೂ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರಗಳ ಮೇಲಿನ ನಿಯಮಗಳು, 2007[5] ನಿಗದಿಪಡಿಸುತ್ತದೆ.

**ಮಹಾಲೇಖಾಪಾಲರು (ಲೆಕ್ಕಪರಿಶೋಧನೆ–II), ಕರ್ನಾಟಕ, ಬೆಂಗಳೂರು ಇವರ ಕಛೇರಿಯ ಸಾಂಸ್ಥಿಕ ರಚನೆ**

**1.7**. ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ರಾಜ್ಯ ಕಚೇರಿಗಳನ್ನು ಕ್ಲಸ್ಟರ್‌ಗಳ ಹಂಚಿಕೆಯ ಆಧಾರದ ಮೇಲೆ ಪುನರ್‌ರಚಿಸಲಾಯಿತು (ಮಾರ್ಚ್ 2020). ಪ್ರತಿ ಕ್ಲಸ್ಟರ್ ಅಂತರ್–ಸಂಪರ್ಕಿತ ಫಲಿತಾಂಶಗಳು ಮತ್ತು ಸಂಪರ್ಕಗಳೊಂದಿಗೆ ಇಲಾಖೆಗಳನ್ನು ಒಳಗೊಂಡಿತ್ತು. ಮಹಾಲೇಖಾಪಾಲರು (ಲೆಕ್ಕಪರಿಶೋಧನೆ–II) 19 ಇಲಾಖೆಗಳು ಮತ್ತು 13 ಸ್ವಾಯತ್ತ ಸಂಸ್ಥೆಗಳು (***ಅನುಬಂಧ–2***) ಭರಿಸಿದ ವೆಚ್ಚದ ಲೆಕ್ಕಪರಿಶೋಧನೆಗೆ ಜವಾಬ್ದಾರರಾಗಿರುತ್ತಾರೆ. ಮಹಾಲೇಖಾಪಾಲರಿಗೆ (ಲೆಕ್ಕಪರಿಶೋಧನೆ–II), ಮೂವರು ಉಪ ಮಹಾಲೇಖಾಪಾಲರು ಮತ್ತು ವಿವಿಧ ಅಧೀನ ಅಧಿಕಾರಿಗಳು ನೆರವು ನೀಡುತ್ತಾರೆ. ಈ ವರದಿಯ ಭಾಗ–I ಮಹಾಲೇಖಾಪಾಲರ (ಲೆಕ್ಕಪರಿಶೋಧನೆ–II) ಅಧಿಕಾರ ವ್ಯಾಪ್ತಿಯಲ್ಲಿರುವ ಇಲಾಖೆಗಳಿಗೆ (ಸಾರ್ವಜನಿಕ ವಲಯ ಕಂಪನಿಗಳನ್ನು ಹೊರತುಪಡಿಸಿ) ಸಂಬಂಧಿಸಿದ ಅವಲೋಕನಗಳನ್ನು ಒಳಗೊಂಡಿದೆ.

**ಲೆಕ್ಕಪರಿಶೋಧನೆಯ ಯೋಜನೆ ಮತ್ತು ನಿರ್ವಹಣೆ**

**1.8**. ಲೆಕ್ಕಪರಿಶೋಧನಾ ಪ್ರಕ್ರಿಯೆಯು ಸರ್ಕಾರದ ವಿವಿಧ ಇಲಾಖೆಗಳು ಭರಿಸಿದ ವೆಚ್ಚಗಳ ಆಧಾರದ ಮೇಲೆ ಅಪಾಯಗಳ ಮೌಲ್ಯಮಾಪನದೊಂದಿಗೆ, ಚಟುವಟಿಕೆಗಳ ನಿರ್ಣಾಯಕತೆ/ಸಂಕೀರ್ಣತೆ, ನಿಯೋಜಿತ ಹಣಕಾಸಿನ ಅಧಿಕಾರಗಳ ಮಟ್ಟ, ಎದುರಿಸುವ ಒಟ್ಟಾರೆ ಆಂತರಿಕ ನಿಯಂತ್ರಣಗಳ ಮೌಲ್ಯಮಾಪನ ಮತ್ತು ಮಧ್ಯಸ್ಥಗಾರರ ಕಾಳಜಿ, ಇವುಗಳಿಂದ ಪ್ರಾರಂಭವಾಗುತ್ತದೆ. ಈ ಪ್ರಕ್ರಿಯೆಯಲ್ಲಿ ಹಿಂದಿನ ಲೆಕ್ಕಪರಿಶೋಧನಾ ಸಂಶೋಧನೆಗಳನ್ನು ಸಹ ಪರಿಗಣಿಸಲಾಗುತ್ತದೆ. ಅಪಾಯದ ಮೌಲ್ಯಮಾಪನದ ಆಧಾರದ ಮೇಲೆ ಲೆಕ್ಕಪರಿಶೋಧನೆಯ ಆವರ್ತನ ಮತ್ತು ವ್ಯಾಪ್ತಿಯನ್ನು ನಿರ್ಧರಿಸಲಾಗುತ್ತದೆ.

ಪ್ರತಿ ಘಟಕದ ಲೆಕ್ಕಪರಿಶೋಧನೆಯು ಪೂರ್ಣಗೊಂಡ ನಂತರ, ತಪಾಸಣಾ ವರದಿಗಳನ್ನು ಒಳಗೊಂಡ

---

[2] (i) ರಾಜ್ಯದ ಸಂಚಿತ ನಿಧಿಯ ಎಲ್ಲಾ ವಹಿವಾಟುಗಳು (ii) ಸಾದಿಲ್ವಾರು ನಿಧಿ ಮತ್ತು ಸಾರ್ವಜನಿಕ ಲೆಕ್ಕಗಳಿಗೆ ಸಂಬಂಧಿಸಿದ ಎಲ್ಲಾ ವಹಿವಾಟುಗಳು ಮತ್ತು (iii) ಎಲ್ಲ ವ್ಯಾಪಾರ, ಉತ್ಪಾದನೆ, ಲಾಭ ಮತ್ತು ನಷ್ಟ ಲೆಕ್ಕಗಳು ಬ್ಯಾಲೆನ್ಸ್ ಶೀಟ್‌ಗಳು ಮತ್ತು ಇತರೆ ಲೆಕ್ಕಗಳು, ಇವುಗಳ ಲೆಕ್ಕಪರಿಶೋಧನೆ.

[3] ಸಂಬಂಧಪಟ್ಟ ಶಾಸನಗಳ ನಿಬಂಧನೆಗಳಿಗೆ ಅನುಸಾರವಾಗಿ ಸಂಸತ್ತು ಮಾಡಿದ ಕಾನೂನಿನ ಮೂಲಕ ಅಥವಾ ಅಡಿಯಲ್ಲಿ ಸ್ಥಾಪಿಸಲಾದ ನಿಗಮಗಳ (ಕಂಪನಿಗಳಲ್ಲ) ಖಾತೆಗಳ ಲೆಕ್ಕಪರಿಶೋಧನೆ.

[4] ರಾಜ್ಯಪಾಲರ ಕೋರಿಕೆಯ ಮೇರೆಗೆ ರಾಜ್ಯ ಶಾಸಕಾಂಗವು ಮಾಡಿದ ಕಾನೂನಿನ ಮೂಲಕ ಸ್ಥಾಪಿಸಲಾದ ನಿಗಮಗಳ ಲೆಕ್ಕಪತ್ರಗಳ ಲೆಕ್ಕಪರಿಶೋಧನೆ.

[5] 2020ರಲ್ಲಿ ತಿದ್ದುಪಡಿ ಮಾಡಲ್ಪಟ್ಟಿದೆ.

ಲೆಕ್ಕಪರಿಶೋಧನಾ ಫಲಿತಾಂಶಗಳನ್ನು ಇಲಾಖೆಗಳ ಮುಖ್ಯಸ್ಥರಿಗೆ ನೀಡಲಾಗುತ್ತದೆ. ತಪಾಸಣಾ ವರದಿಗಳನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ಲೆಕ್ಕಪರಿಶೋಧನೆಯ ಫಲಿತಾಂಶಗಳಿಗೆ ಪ್ರತಿಕ್ರಿಯೆಯನ್ನು ಒದಗಿಸುವಂತೆ ಇಲಾಖೆಗಳನ್ನು ವಿನಂತಿಸಲಾಗುತ್ತದೆ. ಪ್ರತಿಕ್ರಿಯೆಗಳನ್ನು ಸ್ವೀಕರಿಸಿದಾಗಲೆಲ್ಲ, ಲೆಕ್ಕಪರಿಶೋಧನೆಯ ಸಂಶೋಧನೆಗಳನ್ನು ಇತ್ಯರ್ಥಗೊಳಿಸಲಾಗುತ್ತದೆ ಅಥವಾ ಅನುಸರಣೆಗಾಗಿ ಮುಂದಿನ ಕ್ರಮವನ್ನು ಸೂಚಿಸಲಾಗುತ್ತದೆ. ಈ ತಪಾಸಣಾ ವರದಿಗಳಿಂದ ಉಂಟಾಗುವ ಪ್ರಮುಖ ಲೆಕ್ಕಪರಿಶೋಧನಾ ಅವಲೋಕನಗಳನ್ನು ಲೆಕ್ಕಪರಿಶೋಧನಾ ವರದಿಗಳಲ್ಲಿ ಸೇರಿಸಲು ಪ್ರಕ್ರಿಯೆ ಗೊಳಿಸಲಾಗುತ್ತದೆ, ಇದನ್ನು ರಾಜ್ಯ ಶಾಸಕಾಂಗದಲ್ಲಿ ಮಂಡಿಸಲು ಭಾರತದ ಸಂವಿಧಾನದ 151ನೇ ವಿಧಿಯ ಅಡಿಯಲ್ಲಿ ರಾಜ್ಯದ ರಾಜ್ಯಪಾಲರಿಗೆ ಸಲ್ಲಿಸಲಾಗುತ್ತದೆ.

## ಪ್ರಮುಖ ಲೆಕ್ಕಪರಿಶೋಧನಾ ಅವಲೋಕನಗಳು ಮತ್ತು ಲೆಕ್ಕಪರಿಶೋಧನೆಗೆ ಪ್ರತಿಕ್ರಿಯೆ

**1.9**. ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯ ಮೂಲಕ ವಿವಿಧ ಕಾರ್ಯಕ್ರಮಗಳು/ಚಟುವಟಿಕೆಗಳ ಅನುಷ್ಠಾನದಲ್ಲಿ ಗಮನಾರ್ಹ ನ್ಯೂನತೆಗಳನ್ನು ಮತ್ತು ಕಾರ್ಯಕ್ರಮಗಳ ಯಶಸ್ಸು ಮತ್ತು ಇಲಾಖೆಗಳ ಕಾರ್ಯನಿರ್ವಹಣೆಯ ಮೇಲೆ ಪರಿಣಾಮ ಬೀರುವ ಆಯ್ದ ಇಲಾಖೆಗಳಲ್ಲಿನ ಆಂತರಿಕ ನಿಯಂತ್ರಣಗಳ ಗುಣಮಟ್ಟದ ಮೇಲೆ ಲೆಕ್ಕಪರಿಶೋಧನೆಯು ವರದಿ ಮಾಡಿದೆ. ಹಾಗೆಯೇ ಸರ್ಕಾರಿ ಇಲಾಖೆಗಳು/ ಸಂಸ್ಥೆಗಳ ಅನುಸರಣಾ ಲೆಕ್ಕಪರಿಶೋಧನೆಯ ಸಮಯದಲ್ಲಿ ಗಮನಿಸಲಾದ ನ್ಯೂನತೆಗಳ ಬಗ್ಗೆಯೂ ವರದಿ ಮಾಡಲಾಗಿದೆ.

ಈ ವರದಿಯಲ್ಲಿ ಸೇರಿಸಿರುವ ಹದಿನಾರು ಕಂಡಿಕೆಗಳನ್ನು ಸಂಬಂಧಿಸಿದ ಇಲಾಖೆಗಳ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು, ಇವರುಗಳಿಗೆ ಆರು ವಾರಗಳೊಳಗೆ ತಮ್ಮ ಪ್ರತಿಕ್ರಿಯೆಗಳನ್ನು ಕಳುಹಿಸುವಂತೆ ಕೇಳಿ ಜುಲೈ 2021 ಮತ್ತು ನವೆಂಬರ್ 2021ರ ನಡುವೆ ಅರೆಸರ್ಕಾರಿ ಪತ್ರದ ಮೂಲಕ ಕಳುಹಿಸಲಾಗಿದೆ. ಎಂಟು ಕಂಡಿಕೆಗಳಿಗೆ ಸರ್ಕಾರದ ಪ್ರತಿಕ್ರಿಯೆಯನ್ನು ಸ್ವೀಕರಿಸಲಾಗಿದ್ದು ಅವುಗಳನ್ನು ವರದಿಯಲ್ಲಿ ಸೂಕ್ತವಾಗಿ ಅಳವಡಿಸಲಾಗಿದೆ.

## ಲೆಕ್ಕಪರಿಶೋಧನೆಗೆ ಸರ್ಕಾರದ ಪ್ರತಿಕ್ರಿಯೆ

***ಬಾಕಿ ಉಳಿದಿರುವ ತಪಾಸಣಾ ವರದಿಗಳು***

**1.10.1**. ನಿಗದಿತ ನಿಯಮಗಳು ಮತ್ತು ಕಾರ್ಯವಿಧಾನಗಳ ಅನುಸರಣೆಯನ್ನು ಖಚಿತಪಡಿಸಿಕೊಳ್ಳಲು ಹಾಗೂ ತಪಾಸಣಾ ವರದಿಗಳಲ್ಲಿ ಗಮನಿಸಿದ ನ್ಯೂನತೆಗಳು ಮತ್ತು ಲೋಪಗಳಿಗೆ ಹೊಣೆಗಾರಿಕೆಗಾಗಿ ಮಹಾಲೇಖಾಪಾಲರು ಜಾರಿಮಾಡಿದ ತಪಾಸಣಾ ವರದಿಗಳಿಗೆ ಕಾರ್ಯಾಂಗವು ತ್ವರಿತ ಪ್ರತಿಕ್ರಿಯೆ ನೀಡಬೇಕೆಂದು 2001ರಲ್ಲಿ ಹಣಕಾಸು ಇಲಾಖೆಯು ಹೊರಡಿಸಿರುವ ಲೆಕ್ಕಪರಿಶೋಧನಾ ಅವಲೋಕನಗಳ ತ್ವರಿತ ಇತ್ಯರ್ಥಕ್ಕಾಗಿನ ಸೂಚನೆಗಳ ಕೈಪಿಡಿಯು ನಿಗದಿಪಡಿಸುತ್ತದೆ. ಕಛೇರಿಗಳ ಮುಖ್ಯಸ್ಥರು ಮತ್ತು ನಂತರದ ಉನ್ನತ ಅಧಿಕಾರಿಗಳು ತಪಾಸಣಾ ವರದಿಗಳಲ್ಲಿ ಒಳಗೊಂಡಿರುವ ಅವಲೋಕನಗಳನ್ನು ಅನುಪಾಲಿಸಬೇಕು, ದೋಷಗಳು ಮತ್ತು ಲೋಪಗಳನ್ನು ತ್ವರಿತವಾಗಿ ಸರಿಪಡಿಸಬೇಕು ಮತ್ತು ಅವರ ಅನುಸರಣೆಯನ್ನು ಮಾಹಾಲೇಖಾಪಾಲರಿಗೆ ವರದಿ ಮಾಡಬೇಕು. ಲೆಕ್ಕಪರಿಶೋಧನಾ ಅವಲೋಕನಗಳ ಮೇಲ್ವಿಚಾರಣೆಯನ್ನು ಸುಗಮಗೊಳಿಸಲು ಮಹಾಲೇಖಾಪಾಲರು ಬಾಕಿ ಇರುವ ತಪಾಸಣಾ ವರದಿಗಳ ಅರ್ಧ ವಾರ್ಷಿಕ ವರದಿಯನ್ನು ಇಲಾಖೆಯ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾರೆ.

31 ಮಾರ್ಚ್ 2020ರಲ್ಲಿದ್ದಂತೆ ಎಲ್ಲ ಇಲಾಖೆಗಳಿಗೆ ಪ್ರತಿಯಾಗಿ 2,277 ತಪಾಸಣಾ ವರದಿಗಳು (11,252 ಕಂಡಿಕೆಗಳು) ಬಾಕಿ ಉಳಿದಿದ್ದವು. ಎಷ್ಟು ವರ್ಷಗಳಿಂದ ಬಾಕಿ ಉಳಿದಿದ್ದವು ಎನ್ನುವ ವಿವರಗಳನ್ನು

ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

**ಕೋಷ್ಟಕ ಸಂಖ್ಯೆ 1.3: ಬಾಕಿ ಇರುವ ತಪಾಸಣಾ ವರದಿಗಳ ಮತ್ತು ಕಂಡಿಕೆಗಳ ವರ್ಷಾವಾರು ವಿವರಗಳು**

| ಕ್ರಮ ಸಂಖ್ಯೆ | ವರ್ಷ | ತಪಾಸಣಾ ವರದಿಗಳ ಸಂಖ್ಯೆ | ಕಂಡಿಕೆಗಳ ಸಂಖ್ಯೆ |
|---|---|---|---|
| 1 | < 1 ವರ್ಷಕ್ಕಿಂತ ಕಡಿಮೆ | 294 | 2,530 |
| 2 | 1ರಿಂದ 2 ವರ್ಷಗಳು | 189 | 1548 |
| 3 | 2ರಿಂದ 5 ವರ್ಷಗಳು | 605 | 3,206 |
| 4 | 5ರಿಂದ 10 ವರ್ಷಗಳು | 743 | 3,037 |
| 5 | 10 ವರ್ಷಗಳಿಗೂ ಅಧಿಕ | 446 | 931 |
| | **ಒಟ್ಟು** | **2,277** | **11,252** |

ಮಾರ್ಚ್ 2020ರವರೆಗೆ ಜಾರಿ ಮಾಡಲಾದ ತಪಾಸಣಾ ವರದಿಗಳಲ್ಲಿ ಬಾಕಿ ಉಳಿದಿರುವ ತಪಾಸಣಾ ವರದಿಗಳ ಪರಿಶೀಲನೆಯು, 294 ತಪಾಸಣಾ ವರದಿಗಳು (2,530 ಕಂಡಿಕೆಗಳು) ಒಂದು ವರ್ಷಕ್ಕಿಂತ ಕಡಿಮೆ ಅವಧಿಗೆ ಬಾಕಿ ಉಳಿದಿದ್ದವು, 1,537 ತಪಾಸಣಾ ವರದಿಗಳು (7,791 ಕಂಡಿಕೆಗಳು) ಒಂದು ವರ್ಷಕ್ಕಿಂತ ಹೆಚ್ಚು ಆದರೆ 10 ವರ್ಷಗಳಿಗಿಂತ ಕಡಿಮೆ ಅವಧಿಗೆ ಬಾಕಿ ಉಳಿದಿದ್ದವು ಮತ್ತು 446 ತಪಾಸಣಾ ವರದಿಗಳು (931 ಕಂಡಿಕೆಗಳು) 10 ವರ್ಷಗಳಿಗೂ ಅಧಿಕ ಅವಧಿಗೆ ಬಾಕಿ ಉಳಿದಿದ್ದವು ಎಂಬುದನ್ನು ತಿಳಿಯಪಡಿಸಿತು. ವರ್ಷವಾರು ಮತ್ತು ಇಲಾಖಾವಾರು ತಪಾಸಣಾ ವರದಿಗಳ ವಿವರಗಳು ಮತ್ತು ಬಾಕಿ ಉಳಿದಿರುವ ಕಂಡಿಕೆಗಳನ್ನು ***ಅನುಬಂಧ–3**ರಲ್ಲಿ* ನೀಡಲಾಗಿದೆ.

***ಲೆಕ್ಕಪರಿಶೋಧನಾ ವರದಿಗಳ ಮೇಲಿನ ಅನುಸರಣಾ ಕ್ರಮಗಳು***

**1.10.2**. ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಕಾರ್ಯವಿಧಾನದ ನಿಯಮಗಳ ಕೈಪಿಡಿ (ಆಂತರಿಕ ಕಾರ್ಯ ನಿರ್ವಹಣೆ) 1999, ಸರ್ಕಾರದ ಎಲ್ಲಾ ಇಲಾಖೆಗಳು ಲೆಕ್ಕಪರಿಶೋಧನಾ ವರದಿಗಳಲ್ಲಿ ಸೇರಿಸಿರುವ ಲೆಕ್ಕಪರಿಶೋಧನಾ ಅವಲೋಕನಗಳಿಗೆ, ಶಾಸಕಾಂಗದಲ್ಲಿ ಅವುಗಳನ್ನು ಮಂಡಿಸಿದ ನಾಲ್ಕು ತಿಂಗಳೊಳಗೆ, ಕ್ರಮ ತೆಗೆದುಕೊಂಡ ಟಿಪ್ಪಣಿಗಳ ರೂಪದಲ್ಲಿ ವಿವರವಾದ ವಿವರಣೆಯನ್ನು ಒದಗಿಸುವಂತೆ ನಿಗದಿಪಡಿಸುತ್ತದೆ.

ಆಡಳಿತಾತ್ಮಕ ಇಲಾಖೆಗಳು ಈ ಸೂಚನೆಗಳನ್ನು ಅನುಪಾಲಿಸಿರಲಿಲ್ಲ ಮತ್ತು ***ಅನುಬಂಧ–4**ರಲ್ಲಿ* ವಿವರಿಸಿದಂತೆ ಹನ್ನೊಂದು ಇಲಾಖೆಗಳು 31 ಡಿಸೆಂಬರ್ 2021ರಲ್ಲಿದ್ದಂತೆ, 2003–04ರಿಂದ 2018–19ರ ಅವಧಿಯ 101 ಕಂಡಿಕೆಗಳಿಗೆ ಕ್ರಮ ತೆಗೆದುಕೊಂಡ ಟಿಪ್ಪಣಿಗಳನ್ನು ಸಲ್ಲಿಸಿರಲಿಲ್ಲ.

***ಸಾರ್ವಜನಿಕ ಲೆಕ್ಕಪತ್ರ ಸಮಿತಿಯಿಂದ ಚರ್ಚೆಯಾಗಬೇಕಿರುವ ಕಂಡಿಕೆಗಳು***

**1.10.3**. 30 ನವೆಂಬರ್ 2021ರಲ್ಲಿದ್ದಂತೆ ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಚರ್ಚೆಗೆ ಬಾಕಿ ಇರುವ ಕಂಡಿಕೆಗಳ ಪರಿಶೀಲನೆಯು, 148 ಕಂಡಿಕೆಗಳು (ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಗಳು ಮತ್ತು ಸಮೀಕ್ಷೆಗಳನ್ನು ಒಳಗೊಂಡಂತೆ) ಇನ್ನೂ ಚರ್ಚಿಸಬೇಕಾಗಿದೆ ಎಂದು ತಿಳಿಯಪಡಿಸಿತು. 31 ಡಿಸೆಂಬರ್ 2021ರಲ್ಲಿದ್ದಂತೆ ಸಾರ್ವಜನಿಕ ಲೆಕ್ಕಪತ್ರ ಸಮಿತಿಯಿಂದ ಚರ್ಚೆಗೆ ಬಾಕಿ ಉಳಿದಿರುವ ಕಂಡಿಕೆಗಳ (ಸಾಮಾನ್ಯ ಮತ್ತು ಅಂಕಿಅಂಶ ಕಂಡಿಕೆಗಳನ್ನು ಹೊರತುಪಡಿಸಿ) ಇಲಾಖಾವಾರು ವಿವರಗಳನ್ನು ***ಅನುಬಂಧ–5**ರಲ್ಲಿ* ನೀಡಲಾಗಿದೆ.

**ರಾಜ್ಯ ಶಾಸಕಾಂಗದಲ್ಲಿ ಸ್ವಾಯತ್ತ ಸಂಸ್ಥೆಗಳ ಪ್ರತ್ಯೇಕ ಲೆಕ್ಕಪರಿಶೋಧನಾ ವರದಿಗಳ ಮಂಡನೆಯ ಸ್ಥಿತಿ**

**1.11.** ಮಹಾಲೇಖಾಪಾಲರ (ಲೆಕ್ಕಪರಿಶೋಧನೆ–II) ವ್ಯಾಪ್ತಿಗೆ ಒಳಪಡುವ ರಾಜ್ಯದ 13 ಸ್ವಾಯತ್ತ ಸಂಸ್ಥೆಗಳ ಲೆಕ್ಕಪತ್ರಗಳ ಲೆಕ್ಕಪರಿಶೋಧನೆಯನ್ನು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರಿಗೆ ವಹಿಸಲಾಗಿದೆ. ಲೆಕ್ಕಪರಿಶೋಧನೆಯ ವಹಿಸುವಿಕೆ, ಲೆಕ್ಕಪರಿಶೋಧನೆಗೆ ಲೆಕ್ಕಪತ್ರಗಳನ್ನು ಸಲ್ಲಿಸುವಿಕೆ, ಪ್ರತ್ಯೇಕ ಲೆಕ್ಕಪರಿಶೋಧನಾ ವರದಿಗಳ ಜಾರಿಗೊಳಿಸುವಿಕೆ ಮತ್ತು ಶಾಸಕಾಂಗದಲ್ಲಿ ಅವುಗಳ ಮಂಡನೆಯ ಸ್ಥಿತಿಯನ್ನು ***ಅನುಬಂಧ–2***ರಲ್ಲಿ ನೀಡಲಾಗಿದೆ.

ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರವು (ಜುಲೈ 2017ರಲ್ಲಿ ಸ್ಥಾಪಿತವಾದ) ಪ್ರಾರಂಭದಿಂದಲೂ ವಾರ್ಷಿಕ ಲೆಕ್ಕಪತ್ರಗಳನ್ನು ಸಲ್ಲಿಸಿರಲಿಲ್ಲ. ಜೂನ್ 2020ರಲ್ಲಿದ್ದಂತೆ ಸ್ವಾಯತ್ತ ಸಂಸ್ಥೆಗಳಿಂದ ವಾರ್ಷಿಕ ಲೆಕ್ಕಪತ್ರಗಳ ಸಲ್ಲಿಕೆಯಲ್ಲಿನ ವಿಳಂಬವು 3ರಿಂದ 36 ತಿಂಗಳುಗಳ ವ್ಯಾಪ್ತಿಯಲ್ಲಿದ್ದಿತು. ಲೆಕ್ಕಪತ್ರಗಳನ್ನು ಅಂತಿಮಗೊಳಿಸುವಿಕೆಯಲ್ಲಿನ ವಿಳಂಬವು ಹಣಕಾಸಿನ ಅಕ್ರಮಗಳು ಪತ್ತೆಯಾಗದೆ ಹೋಗುವ ಅಪಾಯವನ್ನು ಹೊಂದಿರುತ್ತದೆ. ಆದ್ದರಿಂದ, ಲೆಕ್ಕಪತ್ರಗಳನ್ನು ಅಂತಿಮಗೊಳಿಸಿ ಶೀಘ್ರವಾಗಿ ಲೆಕ್ಕಪರಿಶೋಧನೆಗೆ ಸಲ್ಲಿಸುವುದು. ಅಗತ್ಯವಾಗಿದೆ.

**ಲೆಕ್ಕಪರಿಶೋಧನಾ ವರದಿಗಳಲ್ಲಿ ಸೇರಿಸಿರುವ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಗಳು ಮತ್ತು ಕಂಡಿಕೆಗಳ ವರ್ಷಾವಾರು ವಿವರಗಳು**

**1.12.** ಹಿಂದಿನ ಮೂರು ವರ್ಷಗಳಲ್ಲಿ ಲೆಕ್ಕಪರಿಶೋಧನಾ ವರದಿಗಳಲ್ಲಿ ಸೇರಿಸಿರುವ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಗಳನ್ನು ಮತ್ತು ಕಂಡಿಕೆಗಳ ವರ್ಷಾವಾರು ವಿವರಗಳನ್ನು ಅವುಗಳ ಹಣದ ಮೌಲ್ಯದೊಂದಿಗೆ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ:

**ಕೋಷ್ಟಕ ಸಂಖ್ಯೆ 1.4: 2016–17ರಿಂದ 2019–20ರ ಅವಧಿಯಲ್ಲಿ ಲೆಕ್ಕಪರಿಶೋಧನಾ ವರದಿಗಳಲ್ಲಿ ಸೇರಿರುವ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಗಳು ಮತ್ತು ಕಂಡಿಕೆಗಳ ವಿವರಗಳು**

| ಕ್ರಮ ಸಂಖ್ಯೆ | ವರ್ಷ | ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ | | ಕಂಡಿಕೆಗಳು | | ಸ್ವೀಕರಿಸಿದ ಪ್ರತಿಕ್ರಿಯೆಗಳು | |
|---|---|---|---|---|---|---|---|
| | | ಸಂಖ್ಯೆ | ಹಣದ ಮೌಲ್ಯ (₹ಕೋಟಿಗಳಲ್ಲಿ) | ಸಂಖ್ಯೆ | ಹಣದ ಮೌಲ್ಯ ( ಕೋಟಿಗಳಲ್ಲಿ) | ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ | ಕಂಡಿಕೆಗಳು |
| 1 | 2016–17 | 1 | 1,164.40 | 13 | 187.25 | 0 | 4 |
| 2 | 2017–18 | 2 | 3,349.68 | 7 | 1,106.50 | 0 | 1 |
| 3 | 2018–19 | - | – | 11 | 39.20 | 0 | 0 |

ಮೂಲ: 2016–17, 2017–18 ಮತ್ತು 2019–20ರ ಸಾಲಿನ ಸಿಎಜಿರವರ ಲೆಕ್ಕಪರಿಶೋಧನಾ ವರದಿಗಳು (ಆರ್ಥಿಕ ಮತ್ತು ರಾಜಸ್ವ ವಲಯ ಲೆಕ್ಕಪರಿಶೋಧನೆ), ಕರ್ನಾಟಕ ಸರ್ಕಾರ.